ಬಹುಶಃ ರಾಷ್ಟ್ರೀಯ ಹೆದ್ದಾರಿಯಲ್ಲಿ ಒಂದೊಂದು ನಿಮಿಷಕ್ಕೆ ಒಂದು ವಾಹನ ಸಂಚರಿಸುತ್ತದೆ. ಅದನ್ನು ತಡೆಯಬೇಕಾದರೆ, ರಾಷ್ಟ್ರೀಯ ಹೆದ್ದಾರಿಗಳಲ್ಲಿರತಕ್ಕ ತಾಲ್ಲೂಕು ಕೇಂದ್ರಗಳಲ್ಲಿ ಈ ಟ್ರಾಫಿಕ್ ಪೋಲೀಸ್ ಸ್ಟೇಷನ್ನು ಮಾಡಿದರೆ ಮಾತ್ರ ಉಪಯೋಗವಾಗುತ್ತದೆ ಎಂಬುದು ನನ್ನ ಅನಿಸಿಕೆ. ಅದಕ್ಕೆ ಇಲ್ಲ ಎನ್ನತಕ್ಕಂಥ ಉತ್ತರವನ್ನು ತಾವು ಕೊಟ್ಟಿದ್ದೀರಿ, ಬದಲಿ ವ್ಯವಸ್ಥೆ ಏನು ಮಾಡುತ್ತೀರಿ ಎನ್ನತಕ್ಕದ್ದಕ್ಕೆ ರಸ್ತೆ ತಡೆಗಳನ್ನು ಮಾಡುತ್ತೀರ ಎಂಬುದನ್ನು ತಾವು ಹೇಳಿದ್ದೀರಿ. ಅದು ಸಮರ್ಪಕವಲ್ಲ. ಏಕೆಂದರೆ ತಾವು ಯಾರೋ ಕೊಟ್ಟ ಉತ್ತರವನ್ನು ಓದಿ ಹೇಳುತ್ತಿದ್ದೀರಿ ತಾವು ಒಮ್ಮೆ ಕುಂದಾಪುರಕ್ಕೆ ಬಂದು ನೋಡಿ, ಆ ರೀತಿಯ ಕೆಲಸಗಳನ್ನು ಎಲ್ಲೆ ಮಾಡಿದ್ದಾರೆ, ಅಲ್ಲಿ ಎಲ್ಲಿ ವಾಹನಗಳನ್ನು ತಡೆಯತಕ್ಕಂಥ ವ್ಯವಸ್ಥೆ ಆಗುತ್ತಿದೆ ಅಥವಾ ಈ ವಾಹನಗಳ ಮಿತಿಯನ್ನು ಕಡಿಮೆಗೊಳಿಸುವುದಕ್ಕೆ ತಾವು ಯಾವ ಕ್ರಮವನ್ನು ತೆಗೆದುಕೊಂಡಿದ್ದೀರಿ ಎಂಬುದಕ್ಕೆ ಸ್ಪಷ್ಟವಾದ ಉತ್ತರವನ್ನು ಹೇಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಸನ್ಮಾನ್ಯ ಅಧ್ಯಕ್ಷರೆ, ಕುಂದಾಪುರಕ್ಕೆ ಸಧ್ಯದಲ್ಲಿ ಟ್ರಾಫಿಕ್ ಪೋಲೀಸ್ ಸ್ಟೇಷನ್ನು ಮಂಜೂರು ಮಾಡತಕ್ಕಂಥ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ. ಅಲ್ಲಿ ಟ್ರಾಫಿಕ್ ಕಂಜೆಷನ್ ಇದೆ ಮತ್ತು ಅಪಘಾತಗಳು ಜಾಸ್ತಿಯಾಗುತ್ತಿವೆ ಎಂದು ಹೇಳಿ ಮಾನ್ಯ ಸದಸ್ಯರು ಹೇಳಿದ್ದಾರೆ ಅದನ್ನು ಕಡಿಮೆ ಮಾಡಲಿಕ್ಕೆ ನಾನು ತೀವ್ರವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಈ ತೀವ್ರ ಎಂಬ ಪದವನ್ನು ನಾವು ಕೇಳಿ ಕೇಳಿ ಸಾಕಾಯಿತು. ತೀವ್ರ ಅಂದರೆ ಏನು ಎಂದು ಹಳೆ? ತಾವು ಏನೋ ಒಂದು ಉತ್ತರವನ್ನು ಕೊಟ್ಟು ನುಣುಚಿಕೊಳ್ಳುವುದು ಬೇಡ, ಅಲ್ಲೇನಾದರೂ ವ್ಯವಸ್ಥಿತವಾದ ಕೆಲಸ ಏನು ಮಾಡುತ್ತೀರಿ? ಈ ಟ್ರಾಫಿಕ್ ಪೋಲೀಸ್ ಸ್ಟೇಷನನನು ಮಾಡದೆ ಅಪಘಾತಗಳನ್ನು ತಡೆಯಲಿಕ್ಕೆ ತಮ್ಮ ಕ್ರಮ ಏನು ಎಂಬುದನ್ನು ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅಪಘಾತಗಳನ್ನು ಕಡಿಮೆ ಮಾಡಲಿಕ್ಕೆ, ಹೆಚ್ಚಿನ ನಿಗಾವಹಿಸಲಿಕ್ಕೆ, ಪೋಲೀಸರ ಹೆಚ್ಚಿನ ಗಸ್ತನ್ನು ಮಾಡುವುದಕ್ಕೆ, ಸ್ಪೀಡ್ ಬ್ರೇಕರನ್ನು ಮಾಡಲಿಕ್ಕೆ ನಾನು ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಈಗ ಪೋಲೀಸ್ ಸ್ಟೇಷನನ್ನು ಮಂಜೂರು ಮಾಡತಕ್ಕಂಥ ಸ್ಥಿತಿಯಲ್ಲಿ ನಾವು ಇಲ್ಲ. ಕಾರಣ ಏನು ಎಂದರೆ ಐವತ್ತು ಸಾವಿರ ಜನಸಂಖ್ಯೆ ಇರತಕ್ಕಂಥ ಪಟ್ಟಣಗಳಿಗೆ ನಾವು ಇನ್ನೂ ಟ್ರಾಫಿಕ್ ಪೋಲೀಸ್ ಸ್ಟೇಷನಗಳನ್ನು ಕೊಡುವುದಕ್ಕೆ ಆಗಿಲ್ಲ. ಕುಂದಾಪುರದ ಜನಸಂಖ್ಯೆ ಇಪ್ಪತ್ತು ಸಾವಿರದಿಂದ ಮೂವತ್ತು ಸಾವಿರ ಆಗುತ್ತದೆ. ಅದರಿಂದ ಕೈಯಲ್ಲಿ ಮಾಡಲಿಕ್ಕೆ ಆಗದೇ ಇರುವುದನ್ನು ನಾನು ಮಾಡುತ್ತೇನೆ ಎಂದು ಸುಳ್ಳನ್ನು ಹೇಗೆ ಹೇಳುವುದಕ್ಕಾಗುತ್ತದೆ. ಅದರಿಂದಾಗಿ ನಾನು ಇಷ್ಟೇ ಹೇಳುತ್ತೇನೆ, ಟ್ರಾಫಿಕ್ ಜಾಸ್ತಿಯಾಗಿರತಕ್ಕಂಥನ್ನು ಕಡಿಮೆ ಮಾಡಲಿಕ್ಕೆ, ಅಪಘಾತಗಳನ್ನು ಕಡಿಮೆ ಮಾಡಲಿಕ್ಕೆ ಪೋಲೀಸರ ಮೂಲಕವಾಗಿ ಹೆಚ್ಚಿನ ಬಂದೋಬಸ್ತ ಮಾಡಲಿಕ್ಕೆ ನಾನು ಪ್ರಯತ್ನವನ್ನು ಮಾಡುತ್ತೇನೆ.

ಅಧ್ಯಕ್ಷರು : ಪ್ರಶ್ನೋತ್ತರ ಮುಗಿಯಿತು.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ 1ನೇ ಮಾರ್ಚ್ 96ರ 10ನೇ ಪಟ್ಟಿಯಲ್ಲಿ ಲಿಖಿತ ಮೂಲಕ ಉತ್ತರಿಸುವ 61 ಪ್ರಶ್ನೆಗಳ ಪೈಕಿ 40 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಬೆಂಗಳೂರು ನಗರದಲ್ಲಿ ಅಕ್ರಮವಾಗಿ ನಲ್ಲಿ ಸಂಪರ್ಕ ಹೊಂದಿರುವುದು

675 - ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರಪೇಟೆ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಅಕ್ರಮ ನಲ್ಲಿ ಸಂಪರ್ಕವನ್ನು ಹೊಂದಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಎಷ್ಟು ಮನೆಗಳಿಗೆ ಇಂತಹ ಅಕ್ರಮ ಸಂಪರ್ಕವನ್ನು ಹೊಂದಿರುತ್ತಾರೆ.

ಇ) ಅಕ್ರಮವಾಗಿ ಸಂಪರ್ಕಗಳನ್ನು ಕಲ್ಪಿಸುವ ಅಧಿಕಾರಿಗಳ ವಿರುದ್ಧ ಇದುವರೆವಿಗೂ ಏನಾದರೂ ಕ್ರಮ ಕೈಗೊಳ್ಳಲಾಗಿದೆಯೇ?

ಈ) ಇಂತಹ ಅಕ್ರಮ ಸಂಪರ್ಕಗಳನ್ನು ಸಕ್ರಮಗೊಳಿಸುವ ಬಗ್ಗೆ ಸರ್ಕಾರದ ಯೋಚಿಸಿದೆಯೇ?

ಶ್ರೀ ಆರ್. ರೋಷನ್ ಬೇಗ್ (ಬೆಂಗಳೂರು ನಗರಾಭಿವೃದ್ಧಿ ಮತ್ತು ವಕ್ಫ್ ಸಚಿವರು) :

ಅ) ಹೌದು.

ಆ) ನಗರಾದ್ಯಂತ ಸುಮಾರು 35 ಸಾವಿರ ಮನೆಗಳಲ್ಲಿ ಅಕ್ರಮ ನಲ್ಲಿ ಸಂಪರ್ಕಗಳನ್ನು ಹೊಂದಿರುತ್ತಾರೆ.

ಇ) ಅಕ್ರಮ ಸಂಪರ್ಕಗಳನ್ನು ಬೆಂಗಳೂರು ಜಲಮಂಡಳಿಯ ಅಧಿಕಾರಿಗಳು ಕೊಟ್ಟಿರುವುದಿಲ್ಲ. ರಮಿಸ್ಯೂ ಬಡಾವಣೆಗಳಲ್ಲಿ ವಾಸಿಸುವ ಸಾರ್ವಜನಿಕರು ಜಲಮಂಡಳಿಯ ಪರವಾನಿಗೆ ಇಲ್ಲದೆ ನೀರಿನ ಸಂಪರ್ಕಗಳನ್ನು ಅಕ್ರಮವಾಗಿ ಪಡೆದುಕೊಂಡಿರುತ್ತಾರೆ.

ಈ) ಹೌದು. ಸರ್ಕಾರವು ಬಡಾವಣೆಗಳಲ್ಲಿರುವ ಅಕ್ರಮ ಸಂಪರ್ಕಗಳನ್ನು ಸಕ್ರಮಗೊಳಿಸಲು ತೀರ್ಮಾನಿಸಿದೆ. ಖಾತಾ ಅಥವಾ ಹಕ್ಕು ಪತ್ರವುಳ್ಳ ಮನೆಗಳಿಗೆ ಬೆಂಗಳೂರು ಜಲಮಂಡಳಿಯು ನೀರಿನ ಮೀಟರ್ ಚಾರ್ಜು ಹಾಗೂ ಠೇವಣಿ ಹಣವನ್ನು ಪಡೆದುಕೊಂಡು ಸಕ್ರಮಗೊಳಿಸಲು ಕ್ರಮಗೊಳ್ಳಲಾಗುತ್ತಿದೆ.

ತುಂಗಾಭದ್ರಾ ನಾಲೆಯ ಬದುಗಳನ್ನು ಬಲಗೊಳಿಸುವುದು

676 - ಶ್ರೀ ಎಂ.ಪಿ. ಅಪ್ಪಚ್ಚುರಂಜನ್ (ಸೋಮವಾರಪೇಟೆ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಭದ್ರಾ ಎಡದಂಡೆ ನಾಲೆಯ ಎರಡೂ ಕಡೆಯ ಬದುಗಳನ್ನು ಬಲಗೊಳಿಸುವ